ಮೀಟರ್ ನಿಂದ ಐದೂವರೆ ಮೀಟರ್ ವರೆಗೆ ಮಾಡಬೇಕು ಎನ್ನುವಂಥ ಬೇಡಿಕೆಯನ್ನು ಇಟ್ಟಿದ್ದಾರೆ. ಈ ಬೇಡಿಕೆಗಳನ್ನು ಸಹ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಜೊತೆಗೆ ಪ್ರಮುಖವಾದ ರಸ್ತೆಗಳಿಗೆ ರೂ. 50.00 ಲಕ್ಷ ಅಥವಾ ರೂ. 60.00 ಲಕ್ಷ ಸಾಕಾಗುವುದಿಲ್ಲ ಎನ್ನುವಂಥ ಬೇಡಿಕೆಯನ್ನು ಮತ್ತೊಬ್ಬ ಶಾಸಕರು ಕೇಳಿದ್ದಾರೆ. ಆದರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಿವಿಧ ಭಿನ್ನ ಭಾಗಗಳಲ್ಲಿ ಇರುವಂಥ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ರೂ. 40.00 ಲಕ್ಷಗಳಿಂದ ರೂ. 65.00 ಲಕ್ಷಗಳ ವೆಚ್ಚದಲ್ಲಿ 1 ಕಿ.ಮೀ. ವರೆಗೆ ಹಣ ಖರ್ಚು ಮಾಡಿ ರಸ್ತೆಗಳ ಅಭಿವೃದ್ಧಿ ಮಾಡಬೇಕಾದಂಥ ಕೆಲಸವನ್ನು ನಾವೀಗ ಮಾಡಲು ಪ್ರಾರಂಭ ಮಾಡುತ್ತಿದ್ದೇವೆ. 15.000 ಕಿ.ಮೀ. ರಸ್ತೆಯನ್ನು ತೆಗೆದುಕೊಂಡು ಮಾಡುವಂಥ ಕೆಲಸದ ಬಗ್ಗೆ ಯೋಜನೆ ಮಾಡಿದ್ದು, ಮೊದಲನೇ ಹಂತವಾಗಿ 7,000 ಕಿ.ಮೀ. ರಸ್ತೆಗಳನ್ನು ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಕೆಲವೇ ದಿವಸಗಳಲಿ ಟೆಂಡರ್ ಕರೆದು ಆ ಕೆಲಸವನ್ನು ಸಹ ಮಾಡುತ್ತೇವೆ. ತುರುವೇಕರೆ ಕ್ಷೇತ್ರದ ಶಾಸಕರು ಮತ್ತು ಶ್ರೀ ರುದ್ರೇಶ್ ಗೌಡರವರು ಹೇಳಿದಂತೆ ಶೇಕಡಾ 40 ರಷ್ಟು ರಾಜ್ಯಾದ್ಯಂತ ರಸ್ತೆಗಳ ಗುಂಡಿ ಮುಚ್ಚುವಂಥ ಕೆಲಸ ಆಗಿದೆ. ಮುಂದಿನ ಕೆಲಸವನ್ನು ಸಹ ಶೀಘ್ರದಲ್ಲೇ ಮಾಡುತ್ತಿದ್ದೇವೆ. ಡಿಸೆಂಬರ್ ಕೊನೆಯೊಳಗಾಗಿ ಅಥವಾ ಜನವರಿ 15 ರೊಳಗಾಗಿ ಸಂಪೂರ್ಣವಾಗಿ ರಾಜ್ಯಾದ್ಯಂತ Major district roads & state highway ಗಳ ಗುಂಡಿಗಳನ್ನು ಮುಚ್ಚುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ತೆಂಗು ವಿಮಾ ಯೋಜನೆಯ ವಿವರ

ಶ್ರೀ ವಸಂತ ಬಂಗೇರ ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–

ಶ್ರೀ (ಗಿಲ) ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತೋಟಗಾರಿಕೆ ಇಲಾಖೆ ಹಾಗೂ ತೆಂಗು ಅಭಿವೃದ್ಧಿ ಮಂಡಳಿಯ ಜಂಟಿಯಾಗಿ ನಿರ್ವಹಿಸುವ "ತೆಂಗು ವಿಮಾ ಯೋಜನೆ" ಯಡಿ ರಾಜ್ಯದಲ್ಲಿ ಎಷ್ಟು ತೆಂಗಿನ ಮರಗಳಿಗೆ ರೈತರು ವಿಮೆ ಮಾಡಿಸಿರುತ್ತಾರೆ; (ಜಿಲ್ಲಾವಾರು ವಿವರ ನೀಡುವುದು;

(ಆ) ವಿಮಾ ಅವಧಿಯನ್ನು ವಾರ್ಷಿಕವಾಗಿ ನಿಗದಿಪಡಿಸಿರುವುದರಿಂದ ರೈತರು ತೆಂಗಿನ ಮರಗಳಿಗೆ ವಿಮೆ ಮಾಡಲು ಹಿಂದೇಟು ಹಾಕಿರುವುದು/ಆಸಕ್ತಿ ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ವಿಮಾ ಅವಧಿಯನ್ನು ೩ ವರ್ಷಗಳಿಗೆ ನಿಗದಿಗೊಳಿಸಲು ಇರುವ ತೊಡಕುಗಳೇನು; ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ವಹಿಸುವುದು?

ಶ್ರೀ ಎಸ್. ವಿ. ರವೀಂದ್ರನಾಥ್ (ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):-

(ಅ) 2009-10 ಮತ್ತು 2010-11ನೇ ಸಾಲಿನಲಿ ಒಟ್ಟು 71828 ಸಂಖ್ಯೆ ತೆಂಗಿನ ಮರಗಳಿಗೆ 544 ಜನ ರೈತರು ವಿಮೆ ಮಾಡಿಸಿರುತ್ತಾರೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ.

ವರ್ಷ	ಜಿಲ್ಲೆ	ತಾಲ್ಲೂಕು	ತೆಂಗು ಬೆಳೆಗೆ ವಿಮೆ ಮಾಡಿಸಿದ ರೈತರ ಸಂಖ್ಯೆ	ಬೆಳೆವಿಮೆ ಮಾಡಿಸಿದ ತೆಂಗಿನ ಮರಗಳ ಸಂಖ್ಯೆ		
				4th-15th yr	16th-60th yr	ಒಟ್ಟು
2009-10	ತುಮಕೂರು	ತಿಪಟೂರು	169	2882	28132	31014
2010-11	ದಾವಣಗೆರೆ	ಹೊನ್ನಾಳಿ	141	788	10072	10860
2010-11		ದಾವಣಗೆರೆ	60	0	8174	8174
2010-11		ಹರಪನಹಳ್ಳಿ	86	4279	7673	11952
2010-11		ಜಗಳೂರು	22	286	1867	2153
2010-11	ಚಿತ್ರದುರ್ಗ	ಚಳ್ಳಕೆರೆ	59	186	6689	6875
2010-11	ಶಿವಮೊಗ್ಗ	ಭದ್ರಾವತಿ	7	0	800	800
		ಒಟ್ಟು	544	8421	63407	71828

(ಆ) ಹೌದು;

(ಇ) ಈ ಯೋಜನೆಯನ್ನು ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಜಾರಿಗೊಳಿಸಲಾಗುತ್ತಿವೆ. ಭಾರತ ಸರ್ಕಾರಕ್ಕೆ ವಿಮೆ ಅವಧಿಯನ್ನು 3 ವರ್ಷಗಳಿಗೆ ನಿಗದಿಗೊಳಿಸಲು ಶಿಫಾರಸ್ಸು ಮಾಡಲಾಗಿದೆ.

ಈ ನಿಟ್ಟಿನಲಿ ರಾಜ್ಯ ಸರ್ಕಾರದಿಂದ ತೆಂಗು ಅಭಿವೃದ್ಧಿ ಮಂಡಳಿಯ ಯೋಜನೆಯನ್ನು ರೈತ ಸ್ನೇಹಿಯಾಗಿ ಮಾಡಲು ಕೆಳಕಾಣಿಸಿರುವ ಶಿಫಾರಸ್ಸುಗಳನ್ನು ಮಾಡಲಾಗಿದೆ.

1. ವಿಮಾ ಅವಧಿಯನ್ನು ಮೂರು ವರ್ಷಗಳವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಲಾಗಿದೆ.
2. ವಿಮಾ ಮೊತ್ತವನ್ನು ರೂ. 600/- ರಿಂದ ರೂ. 2000/-ಗಳಿಗೆ ಹೆಚ್ಚಿಸಲು ಕೋರಲಾಗಿದೆ.

3. ಮಳೆಯಾಶ್ರಿತ ಮತ್ತು ನೀರಾವರಿ ಬೆಳೆಗಳಿಗೆ ಪ್ರತ್ಯೇಕವಾದ ವಿಮಾ ಮೊತ್ತವನ್ನು ನಿಗದಿಪಡಿಸಬೇಕು.

4. ಎಲ್ಲಾ ವಿಮಾ ವ್ಯಾಪ್ತಿಯ ಮರಗಳಿಗೆ ಬೆಳೆ ನಷ್ಟದ ಹಾನಿಗೆ ಸಹ ವಿಮಾ ಮೊತ್ತವನ್ನು ನೀಡಬೇಕು.

5. ತೆಂಗಿನ ಮರಗಳಿಗೆ ಪ್ರಾಣಿಗಳಿಂದ ಆದ ನಷ್ಟವನ್ನು ಸಹ ಪರಿಗಣಿಸಬೇಕು.

ದಿನಾಂಕ 26-5-2011 ರಂದು ಜಂಟಿ ನಿರ್ದೇಶಕರು (Credit and Co-operation) ರವರ ಅಧ್ಯಕ್ಷತೆಯಲ್ಲಿ ಕೃಷಿ ಭವನ, ನವದೆಹಲಿಯಲ್ಲಿ ಜರುಗಿದ ಸಭೆಯಲ್ಲಿ ತೆಂಗು ಬೆಳೆ ವಿಮಾ ಯೋಜನೆಯಡಿ ಮಾರ್ಪಾಡುಗಳನ್ನು ಮಾಡುವ ಬಗ್ಗೆ ಚರ್ಚಿಸಲಾಗಿದೆ. ಆದರೆ, 2010-11ನೇ ಸಾಲಿನ ಮಾರ್ಗಸೂಚಿಯಂತೆ 2011-12ನೇ ಸಾಲಿನಲ್ಲಿಯೂ ಕೂಡಾ ತೆಂಗು ಬೆಳೆ ವಿಮಾ ಯೋಜನೆ ಅನುಷ್ಠಾನವನ್ನು ಮುಂದುವರೆಸುವಂತೆ ಕೇಂದ್ರ ಸರ್ಕಾರ ಆದೇಶ ನೀಡಿದೆ.

ಶ್ರೀ ವಸಂಗ ಬಂಗೇರ ಕೆ.: ಮಾನ್ಯ ಉಪಾಧ್ಯಕ್ಷರೇ ಉತ್ತರವನ್ನು ಒದಗಿಸಿದ್ದಾರೆ. ಉತ್ತರದಲ್ಲಿ ಇಡೀ ರಾಜ್ಯದಲ್ಲಿ ಕೇವಲ 544 ಜನ ರೈತರು ವಿಮೆ ಮಾಡಲಿಕ್ಕೆ ಕಾರಣವೇನು? ರೈತರಿಗೆ ಸರಿಯಾದ ತಿಳಿವಳಿಕೆ ಇಲ್ಲದ ಕಾರಣವೇ? ಹಾಗಿದ್ದಲ್ಲಿ ಎಲ್ಲಾ ಮಾಧ್ಯಮಗಳ ಮುಖಾಂತರ ರೈತರಿಗೆ ತಿಳಿವಳಿಕೆ ನೀಡಲು ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಸ್. ಎ. ರವೀಂದ್ರನಾಥ್: ಸನ್ಮಾನ್ಯ ಉಪಾಧ್ಯಕ್ಷರೇ, ತೆಂಗು ಅಭಿವೃದ್ಧಿಯಲ್ಲಿ ತೆಂಗಿನ ಮರಗಳಿಗೆ ಮಾಡಿರುವ ವಿಮೆಗಳ ಬಗ್ಗೆ ಕೇಳಿದ್ದಾರೆ. ಈ ರಾಜ್ಯದಲ್ಲಿ 7 ಕೋಟಿ 6 ಲಕ್ಷ ತೆಂಗಿನ ಮರಗಳಿವೆ. ತೆಂಗಿನ ಮರಗಳಿಗೆ ವಿಮೆ ಮಾಡಿಸುವಂಥ ಸಂದರ್ಭದಲ್ಲಿ ಒಂದು ಮರಕ್ಕೆ ರೂ. 1.00 ರೂಪಾಯಿಯನ್ನು ನಮ್ಮ ರೈತರು ಕಟ್ಟಬೇಕು. ಉಳಿದ ನಾಲ್ಕೂವರೆ ರೂಪಾಯಿಗಳನ್ನು ಸರ್ಕಾರ ಕೊಡುತ್ತದೆ. ಅದನ್ನು ಸಹ ನಮ್ಮ ರೈತರು ಕಟ್ಟುತ್ತಿಲ್ಲ. ಅದರ ಜೊತೆಗೆ ಈವರೆವಿಗೆ ವಿಮೆ ಬಂದಿರುವುದು ಕೇವಲ 49 ಮರಗಳಿಗೆ ಮಾತ್ರ. ತೆಂಗು ವಿಮೆ ಕೇಂದ್ರ ಸಕಾರದ ತೆಂಗು ಅಭಿವೃದ್ಧಿ ನಿಗಮದಿಂದ ಬಂದಿರುವಂಥದ್ದು. ಇರುವಂಥ ವ್ಯವಸ್ಥೆಯಲ್ಲಿ ಒಳ್ಳೆಯ guidelines ಮತ್ತು norms ಗಳಿವೆ. ಒಂದು ಎಕರೆಯಲ್ಲಿ 10 ಮರಗಳು ಪೂರ್ತಿ ನಾಸವಾಗಿದ್ದರೆ ವಿಮೆ ಕೊಡಬೇಕೆಂದು ಇದೆ. ಆದ ಕಾರಣ ನಮ್ಮಲ್ಲಿ ಲಭ್ಯವಿರುವಂಥ ವರದಿಯನ್ನು ಕೊಟ್ಟಿದ್ದೇವೆ.

ಶ್ರೀ ವಸಂಗ ಬಂಗೇರ ಕೆ.: ಮಾನ್ಯ ಉಪಾಧ್ಯಕ್ಷರೇ, ಕೇಂದ್ರ ಸಕರಕ್ಕೆ ಸಲಹೆಗಳನ್ನು ಬರೆದಿದ್ದಾರೆ. ಸರ್ಕಾರ ಕಳುಹಿಸಿದ ಸಲಹೆಗಳ ಬಗ್ಗೆ ಚರ್ಚಿಸಲಾಗಿದೆ. ಆದರೆ ಏನೂ ತೀರ್ಮಾನ ಆಗಿಲ್ಲ. 2010-11ನೇ ಸಾಲಿನ ಮಾರ್ಗಸೂಚಿಯಂತೆ 2011-12ನೇ ಸಾಲಿನಲ್ಲಿ

ತೆಂಗು ಬೆಳೆ ವಿಮಾ ಯೋಜನೆಯ ಅನುಷ್ಠಾನ ಮುಂದುವರೆಸುವಂತೆ ಸೂಚಿಸಿದೆ. ಪುನಃ ಮತ್ತೊಮ್ಮೆ ಸರ್ಕಾರದಿಂದ ಸಲಹೆಗಳನ್ನು ಕೇಂದ್ರಕ್ಕೆ ಕಳುಹಿಸಿದ್ದಾರೆಯೇ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಾನ್ಯ ಅಧ್ಯಕ್ಷರೇ, ಪೌರಾಡಳಿತ ಸಚಿವರಿಗೆ 48ನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ಸಚಿವರು ಉತ್ತರ ನೀಡುವುದಕ್ಕೆ ಕಾಲಾವಕಾಶವನ್ನು ಕೋರಿದ್ದಾರೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ: ಉತ್ತರ ತರುವುದಕ್ಕೆ ತಡವಾಗಿದೆ. ಆದ್ದರಿಂದ ಮುಂದಿನ ಶುಕ್ರವಾರ ಉತ್ತರವನ್ನು ಕೊಡುತ್ತೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮುಂದಿನ ಶುಕ್ರವಾರ ಉತ್ತರವನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ. ಸದನದಲ್ಲಿ 3ನೇ ಬಾರಿ ಈ ಪ್ರಶ್ನೆ ಕೇಳುತ್ತಿರುವುದು. ಪ್ರತಿ ಸದನದಲ್ಲೂ ಇದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಪ್ರತಿ ಬಾರಿಯೂ ಅವಧಿ ಬೇಕು ಎಂದು ಹೇಳುತ್ತಿದ್ದಾರೆ. ದಯವಿಟ್ಟು ಮುಂದಿನ ಶುಕ್ರವಾರ ಇದಕ್ಕೆ ಉತ್ತರ ಕೊಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಸದನ ನಡೆಯದಿದ್ದರೆ ಹೇಗೆ ಕೇಳಬೇಕು? ಮುಂದಿನ ವಾರದಲ್ಲಿ ಕೊಡಿಸಿ, ಶುಕ್ರವಾರವೇ ಏಕೆ? ಸೋಮವಾರ, ಮಂಗಳವಾರದಂದು ಕೊಡಬಹುದಲ್ಲ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ: ನಮ್ಮ ಇಲಾಖೆಗೆ ಸಂಬಂಧಿಸಿದಂತೆ ಪ್ರಶ್ನೆ ಶುಕ್ರವಾರ ಬರುವುದರಿಂದ ಆ ರೀತಿ ಹೇಳಿದ್ದೇನೆ. ಅವರಿಗೆ urgent ಇದ್ದರೆ ಮಂಗಳವಾರ ಅಥವಾ ಬುಧವಾರದಂದು ಕೊಡಿ ಎಂದು ಹೇಳಿದರೆ ಕೊಡುತ್ತೇವೆ.

ಉಪಾಧ್ಯಕ್ಷರು: ಮುಂದಿನವಾರ ಉತ್ತರ ಕೊಡುತ್ತಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಆಯಿತು, ಮುಂದಿನ ವಾರ ಉತ್ತರ ಕೊಡುವುದಕ್ಕೆ ಹೇಳಿ. ಆದರೆ ಶುಕ್ರವಾರವೆಂದು fix ಮಾಡುವುದು ಬೇಡ.

ಕಡೂರು–ಬೀರೂರು ಪುರಸಭೆಗಳಿಗೆ ಒಟ್ಟು ನೀಡಿರುವ ಅನುದಾನ

ಡಾ॥ ವಿಶ್ವನಾಥ್ ವೈ. ಸಿ. (ಕಡೂರು):–

ಔಳ (ಖಂಳ) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಡೂರು ಮತ್ತು ಬೀರೂರು ಪುರಸಭೆಗಳ ಈಗಿನ ಕೌನ್ಸಿಲ್ ಸಮಿತಿಯು ಆಯ್ಕೆಗೊಂಡ ದಿನದಿಂದ ಇದುವರೆಗೆ ಸರ್ಕಾರದಿಂದ ಮಂಜೂರು ಮಾಡಿರುವ ಅನುದಾನ ಎಷ್ಟು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶೇ. ೨೨.೭೫